**15-12-41 ರಾತ್ರಿ 9.20**

ಬಾವಿಯ ಮತ್ತು ಮನೆಯ ಕೆಲಸವು ನಡೆದಿದೆ. ಇಂದು ಮತ್ತೆ ಚೌಕಟ್ಟುಗಳನ್ನು ಕೂಡಿಸಿದರು. ಬಾವಿಯಲ್ಲಿಯ ಕಲ್ಲನ್ನು ಒಡೆವುದು ಸಾಗಿದೆ. ಈ ತರವು ಬೇಗನೆ ಹೋಗಿ, ದೇವಾ, ನೀರು ಬರಬಹುದಲ್ಲವೆ?

ಲಿಂಗಾಯತ ಸಾಹಿತ್ಯ ಸಮಿತಿಗೆ ಪತ್ರವು ಹೋಯ್ತು. ಅವರು ಎಬ್ಬಿಸಿದ ನಿರರ್ಥಕವಾದ ಮತ್ತು ಕಿಡಿಗೇಡಿಯಾದ ಗಲಭೆ ಇನ್ನಾದರೂ ಶಾಂತವಾಗುವುದೆ? ನಮ್ಮಲ್ಲಿ ಬಂಧುಭಾವವು ಇನ್ನೂ ಎಂದು ಬರಬೇಕು? ಏಕೆ ಈ ಮಿಥ್ಯಾಗ್ರಹವು? ಬ್ರಾಹ್ಮಣನಾದಷ್ಟಕ್ಕೆ ಮನುಷ್ಯನು ದೈತ್ಯನೆ? ಬ್ರಾಹ್ಮಣನನ್ನು ತಳ್ಳಬೇಕೆಂಬ ದುರ್ಬುದ್ಧಿಯೇಕೆ? ಎರಡನೆಯವರನ್ನು ತಳ್ಳಲು ಪ್ರಯತ್ನ ಮಾಡಿದರೆ ಆ ಪ್ರಯತ್ನದ ಪರಿಣಾಮವು ತನ್ನ ಮೇಲೆ ಆಗುತ್ತದೆ. ಈ ಸಿದ್ಧಾಂತಕ್ಕೆ ಭಂಗವಿಲ್ಲ. ಮೈತ್ರಿ ಎಂಬುದು ಮನುಷ್ಯನನ್ನು ಇತರ ಪ್ರಾಣಿಗಳಿಂದ ಬೇರೆಯಾಗಿಸುವ ಗುಣವು. ಸ್ವಲ್ಪದರಲ್ಲಿ ಹೇಳುವುದೆಂದರೆ, ಮೈತ್ರಿ ಎಂದರೆ ಮನುಷ್ಯತ್ವವು.

**18-12-41 ರಾತ್ರಿ 9.36**

ಬೋರ್ಡಿನ ಟ್ರೇನಿಂಗ ಕಾಲೇಜಿನಲ್ಲಿ ನನಗೆ ಅಭಿನಂದನ ಸಮಾರಂಭ ಮುಂಜಾವಿನ 9 ಗಂಟೆಗೆ. ಹನ್ನೊಂದೂವರೆ ಗಂಟೆಯವರೆಗೆ ನಡೆಯಿತು. ಶ್ರೀ ಪೂಜಾರ ಅವರು ಅಧ್ಯಕ್ಷರು. ಶ್ರೀ ಮುಧೋಳಕರ ವಾಮನರಾಯರು ಪರಿಚಯ ಮಾಡಿಕೊಟ್ಟರು. ಸುಮಾರು 40 ಮಿನಿಟು ಮಾತನಾಡಿದರು. ನನ್ನ ಸ್ತುತಿ. ನಾನು ದೊಡ್ಡವನಂತೆ, ಮಹಾತ್ಮನಂತೆ! ಈ ಸ್ತುತಿ ಇಲ್ಲದೆ ಪರಿಚಯವಾಗುತ್ತಿರಲಿಲ್ಲವೆ? ಕುಲಕರ್ಣಿ ಎಸ್.ಆರ್. ನನ್ನ ಕೆಲವು ಪದ್ಯಗಳನ್ನು ಹೇಳಿದನು. ಬೇರಿಬ್ಬರು ನನ್ನ ಕವನಗಳನ್ನು ಹಾಡಿದರು. ಮತ್ತೆ ಜೋಶಿ ಎಂಬವರು ಮಾತಾಡಿದರು. ಶ್ರೀ ಪೂಜಾರವರು ನನ್ನನ್ನು ಆಶೀರ್ವದಿಸಿದರು. ನನ್ನ ಸ್ಥಾನವಾವುದೆಂಬುದನ್ನು ವಿವರಿಸಿದರು. ಸಮಾರಂಭವು ಕಳೆಯೇರಿದುದಾಗಿತ್ತು.

ನಾನು ವೃತ್ತಪತ್ರಕ್ಕೆ ಲಿಂಗವಂತರ ಗಲಾಟೆಯ ವಿಷಯದಲ್ಲಿ ಹೇಳಿಕೆಯೊಂದನ್ನು ಕೊಡಬೇಕೆಂದು ಡಾ. ನಾರಾಯಣನ ಅಭಿಪ್ರಾಯವು. ನನಗಿನ್ನೂ ಅದರ ಉಪಯುಕ್ತತೆ ತೋರಲೊಲ್ಲದು. ಶ್ರೀಹರಿ ಕಾಯುವವನು ಸಮರ್ಥನು. ನನ್ನಲ್ಲಿ ಜಾತಿದ್ವೇಷವು ಇಲ್ಲವೆಂಬುದನ್ನು ನನ್ನ ಈವರೆಗಿನ ಜೀವನವನ್ನು ಕಂಡವರಿಗೆ ಮನಗಾಣಿಸಿ ಕೊಡಲು ಯಾವ ಉಪಾಯವು ಉಂಟು? ಇನ್ನು ಮುಂದಾದರೂ ನನ್ನ ನಿರ್ಮಲ ವರ್ತನವೊಂದೇ ಉಪಾಯವು. ಶ್ರೀಹರಿ, ನನ್ನ ಜೀವನದಲ್ಲಿ ನೈರ್ಮಲ್ಯವನ್ನು ಹೆಚ್ಚಿಸು, ತಂದೆ!

**19-12-41 ರಾತ್ರಿ 8.57**

ಮನೆಯ ಕೆಲಸವು ಸಾಗಿದೆ. ಇಟ್ಟಿಗೆ ಆವಿಗೆಯನ್ನು ಇಂದು ಒಡೆದಿದೆ. ಇಟ್ಟಿಗೆಗಳು ಒಳಿತಾಗಿವೆ. ಬಾವಿಗೆ ಸುರಂಗವನ್ನು ಹಚ್ಚಬೇಕಂತೆ!

ಇಂದು ನಮ್ಮ ಶಾಲೆಗೆ ಡಿ.ಪಿ.ಆಯ್. ಆಫೀಸಿನ ಸುಪರಿಂಟೆಂಡೆಂಟರಾದ ಶ್ರೀ ಅಭ್ಯಂಕರರು ಬಂದಿದ್ದರು. ಸಜ್ಜನರು. ಅನುಭವಿಕರು. ಶಿಕ್ಷಕರಲ್ಲಿ ಇರಬೇಕಾದ ಗುಣಗಳಾವುವೆಂಬುದನ್ನು ಕುರಿತು ಸರಸವಾಗಿ ವಿವೇಚನೆ ಮಾಡಿದರು.

ಪಾಂಡುರಂಗರಾಯರು ಪಂಢರಾಪುರದಿಂದ ಇಂದು ಸಂಜೆಯ ಮುಂದೆ ಬಂದರು.

ಗೋಠೆ ಕೇಶವರಾಯರು ಇದೇ ಈಗ ಬಂದು ಹೋದರು. ಹಣವು ಬೇಕಂತೆ. ನನ್ನ ಬಳಿಯಲ್ಲಿ ಇಲ್ಲ. ಜಾನೇವರಿಯ ಮೊದಲನೆಯ ವಾರದವರೆಗೆ ತಡೆಯಲು ಹೇಳಿದೆನು.

ಅಂತಃಕರಣದ ನೈರ್ಮಲ್ಯವಿರದಿದ್ದರೆ ಮನುಷ್ಯನು ಎಷ್ಟು ಶಿಕ್ಷಣಸಂಪನ್ನನಾದರೇನು? ಶಿಕ್ಷಣದಿಂದ ನೈರ್ಮಲ್ಯವು ದೊರೆಯದಿದ್ದರೆ ಆ ಶಿಕ್ಷಣಕ್ಕೆ ಬೆಂಕಿ ಹಚ್ಚುವುದೇ ಒಳಿತು. ನೈರ್ಮಲ್ಯವೀಯದ ಶಿಕ್ಷಣವು ಭಯಂಕರವು.

**21-12-41 ರಾತ್ರಿ 9.12**

ಇಂದು ಬೆಳಗಿನಲ್ಲಿ ಕೇಶವರಾವ ಗೋಠೆಯವರ ತಂದೆ ಬಂದಿದ್ದರು. ಬೇಗನೆ ಎಂದರೆ ಜಾನೇವರಿಯ ಕೊನೆಯೊಳಗಾಗಿ ಮನೆಯ ಕಟ್ಟಡವನ್ನು ಮುಗಿಸಿ ಕೊಟ್ಟರೆ ಕೊಡಬೇಕಾಗುವ ಹಣವನ್ನು ಕೊಟ್ಟು ಮನೆಯೊಳಗೆ ಕಾಲಿಡುವೆನೆಂದು ಹೇಳಿದೆನು. ಕೇಶವರಾಯರಿಗೆ ನಾನು ಈಗ ಮುಂಗಡವಾಗಿ ಕೊಟ್ಟ ಹಣವನ್ನು ಅವರು ಬೇರೆ ಕೆಲಸಗಳಿಗೂ ಉಪಯೋಗಿಸಿಕೊಂಡು ಈಗ ಹಣವಿಲ್ಲದೆ ಇರುವರು.